# ಇಲಿಗಳ ಅವಾಂತರ



ಚಿತ್ರ: ಶಿಲ್ಪಾ ಕಬ್ಬಿಣಕಂತಿ

ಬಹುಕಾಲದ ಹಿಂದೆ ಇಲಿ ಹಾಗೂ ಬೆಕ್ಕುಗಳು ಸ್ನೇಹ, ವಿಶ್ವಾಸದಿಂದ ಬಾಳುತ್ತಿದ್ದವು. ಒಮ್ಮೆ.... ಇಲಿಗಳು ಸಭೆ ನಡೆಸಿ 'ಬಂಧುಗಳೇ... ನಮ್ಮ ಆತ್ಮೀಯ ಮಿತ್ರರಾದಂಥ ಬೆಕ್ಕಣ್ಣನವರಿಗೆ ನಾವೆಲ್ಲಾ ಸೇರಿ ಸಾಮೂಹಿಕ ವಿವಾಹ ಮಾಡಬಾರದೇಕೆ?' ಎಂದಾಗ ಇತರ ಇಲಿಗಳು ತುಂಬಾ ಉತ್ಸಾಹದಿಂದ ಒಪ್ಪಿಗೆಕೊಟ್ಟವು. ಅಂತೂ ಭರ್ಜರಿಯಾಗಿ ಬೆಕ್ಕುಗಳ ಸಾಮೂಹಿಕ ವಿವಾಹಕ್ಕೆ ಇಲಿಗಳೆಲ್ಲಾ ಹಗಲಿರುಳು ಶ್ರಮಿಸಿದವು. ದೊಡ್ಡದಾದ ಮದುವೆ ಮಂಟಪ ಕಂಗೊಳಿಸತೊಡಗಿತು. ತಳಿರು ತೋರಣ, ರಂಗೋಲಿ ಸೊಬಗನ್ನು ಹೆಚ್ಚಿಸಿದವು. ಮದುಮಗ, ಮದುಮಗಳು ಜೋಡಿ ಜೋಡಿಯಾಗಿ ಬಂದು ಆಸನದಲ್ಲಿ ಆಸೀನವಾದವು. ಎಲ್ಲೆಲ್ಲೂ ಸಂತೋಷ, ಸಂಭ್ರಮ, ಸಡಗರದಿಂದ ಬೆಕ್ಕುಗಳ ಮದುವೆಯನ್ನು ಇಲಿಗಳು ಖುಷಿಯಿಂದಲೇ ನೆರವೇರಿಸಿದವು. ಈ ನಡುವೆ ಅವು ತುಂಬಾ ಮುಖ್ಯವಾದ ಅಡುಗೆಯನ್ನೂ ಮಾಡುವುದೇ ಮರೆತು ಬಿಟ್ಟಿದ್ದವು. ಸಾಮೂಹಿಕ ವಿವಾಹವೇನೋ ಜರುಗಿತು. ನವ ದಂಪತಿಗಳಾದ ಬೆಕ್ಕುಗಳಿಗೆ ತುಂಬಾ ಹಸಿವಾಗಿತ್ತು. 'ಎಲ್ಲಿ? ಬೇಗ ಊಟ ತನ್ನಿ! ಬಹಳ ಹೊಟ್ಟೆ ಹಸಿದಿದೆ! ತಾಳಲಾರೆವು' ಎಂದವು. ಅಡುಗೆಯನ್ನೇ ಮಾಡುವುದನ್ನು ಮರೆತ ಇಲಿಗಳ ಸಮೂಹ ಪರಸ್ಪರ ಮುಖ ಮುಖ ನೋಡಿಕೊಳ್ಳತೊಡಗಿದವು. 'ನವ ದಂಪತಿಗಳೇ ನಮ್ಮನ್ನೂ ಕ್ಷಮಿಸಿ! ಗಡಿಬಿಡಿಯಲ್ಲಿ ಭೋಜನದ ವ್ಯವಸ್ಥೆ ಮಾಡುವುದನ್ನೇ ಮರೆತಿದ್ದೇವೆ' ಎಂದವು. ಈ ಮಾತು ಕೇಳಿ ಹಸಿವಿನಿಂದ ಕಂಗೆಟ್ಟಿದ್ದ ಬೆಕ್ಕುಗಳಿಗೆ ಸಿಟ್ಟುನೆತ್ತಿಗೇರಿತು. 'ಹಾಗಾದ್ರೆ... ನೀವಿರುವುದೇಕೆ? ನೀವೇ ನಮ್ಮ ಆಹಾರವಾಗಿ' ಎನ್ನುತ್ತ ಇಲಿಗಳ ಮೇಲೆ ಬಿದ್ದು ಹಿಡಿದು ತಿನ್ನ ತೊಡಗಿದವು. ಅಳಿದುಳಿದ ಇಲಿಗಳು ಓಡಿಹೋಗಿ ಪ್ರಾಣ ಉಳಿಸಿಕೊಂಡವು. ಇಲಿಗಳ ಅವಾಂತರದಿಂದ ಬೆಕ್ಕುಗಳು ಕೋಪಗೊಂಡು ಇಂದಿಗೂ ಅವುಗಳ ಬೇಟೆಯಾಡುವುದು ಮುಂದುವರಿದಿದೆ.

**■ ಅಮರಯ್ಯಾ ಪತ್ರಿಮಠ, ಸುರಪುರ**

# ಪ್ರೀತಿಯ ಮಾಪನ



ಚಿತ್ರ: ವಿಜಯ ಕುಮಾರಿ

ಅಣ್ಣನು ಬಂದನು ತಂಗಿಯ ಕರೆಯಲು
ನೇಸರ ಮೂಡಿತ್ತು
ಪಡುವಣ ದಿಕ್ಕಿನ ಚೋಮನ ಮನೆಯಲಿ
ಕೋಳಿಯು ಕೂಗಿತ್ತು!

ತಂಗಿಯು ಖುಷಿಯಲಿ ನೋಡಿದಳಣ್ಣನ
ಕರೆದಳು ಬಾರಣ್ಣ
ಚಾಪೆಯ ಹರಡುತ ಕೂರಿಸಿ ಕೊಟ್ಟಳು
'ಕಾಫಿಯ ಕುಡಿಯಣ್ಣ!'

ಅಣ್ಣನು ತಂಗಿಗೆ ಪೊಟ್ಟಣ ತೋರಿಸಿ
ಉಲಿದನು 'ನೋಡಮ್ಮ
ಪೊಟ್ಟಣದೊಳಗಡೆ ಕಟ್ಟಿದ ಮಲ್ಲಿಗೆ
ಮಾಲೆಯ ಮುಡಿಯಮ್ಮ!'

ಹಬ್ಬವು ಬಂದಿದೆ ಕರೆಯಲು ಬಂದೆನು
ತೌರಿಗೆ ಬಾ ತಂಗಿ
ಉಡುಗೊರೆ ಸುರಿಮಳೆ ಮಾಡುವೆ ತೌರಲಿ
ತೊಡಿಸುವೆ ನಿಲುವಂಗಿ!

ತೋರುತ ಒಲುಮೆಯು ಬಂದರೆ ಸಾಲದೆ
ಏತಕೆ ಬಹುಮಾನ?
ತೌರಿನ ಬಂಧನ ಬೆಸೆಯುವ ಈ ಕರೆ
ನನಗದೆ ಸಮ್ಮಾನ!

ಅಣ್ಣತಂಗಿಯ ಪ್ರೇಮದ ಬಂಧಕೆ
ಮಾಪನವೇಕಂತೆ?
ಬೆಲೆಯನು ಕಟ್ಟಲು ಸಾಧ್ಯವೆ ಇಲ್ಲದ
ಬಂಧನ ಅದುವಂತೆ!

**■ ಕಿಗ್ಗಾಲು ಎಸ್ ಗಿರೀಶ್, ಮೂರ್ನಾಡು**